**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.**

ಸಿ.ಸಿ ನಂಬರ್ಃ **565/2022**

| | |
|---|---|
| ಪಿರ್ಯಾದಿಃ | ರಾಜ್ಯ, ಪರವಾಗಿ ಕುದುರೆಮುಖ ಪೊಲೀಸ್,<br>ಕಳಸ ತಾಲ್ಲೂಕು. |
| | ವಿರುದ್ಧ |
| ಆರೋಪಿಃ | ಅವಿನಾಶ, ವಯಸ್ಸು ಸುಮಾರು 32 ವರ್ಷ,<br>ಬಿನ್ ಲೋಕೇಶಗೌಡ, ವಾಸಃ ಹಕ್ಕಲುಮನೆ,<br>ಮೇಗರಮಕ್ಕಿ, ಆಡುವಳ್ಳಿ ಗ್ರಾಮ,<br>ಎನ್.ಆರ್.ಪುರ ತಾಲ್ಲೂಕು, |

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಪ್ರಾಸಾ-1 ಲಕ್ಷ್ಮೀ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28.04.2019 ರಂದು ಅವರ ತಂಕೆ-ತಾಯಿ ಹಾಗೂ ಗುರು-ಹಿರಿಯರು ಅವರ ಹಾಗೂ ಆರೋಪಿಯಾದ ನಿಮ್ಮ ಮದುವೆಯನ್ನು ಬಾಳೇಹೊನ್ನೂರಿನ ಒಕ್ಕಲಿಗರ ಸಮುಧಾಯ ಭವನದಲ್ಲಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 3) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮದುವೆ ಸಮಯಕ್ಕೆ ನೀವು ಅವರ ತಂದೆ-ತಾಯಿ ಬಳಿ ರೂ.10 ಲಕ್ಷ ಹಣ ಮತ್ತು 100 ಗ್ರಾಂ ಬಂಗಾರ ಪಡೆದು, ಅವರಿಗೆ ವರದಕ್ಷಿಣೆ ಹಣ ತೆಗೆದುಕೊಂಡು ಬಾ ಎಂದು ಮಾನಸಿಕ ಹಿಂಸೆ ಕೊಡುತ್ತಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 4) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರ ಮೊದಲನೇ ಹೆರಿಗೆ ಸಮಯಕ್ಕೆ ಅವರನ್ನು ಹೆರಿಗೆಗೆ ಕಳುಹಿಸದೇ ನಿಮ್ಮ ಮನೆಯಲ್ಲಿಯೇ ಇಟ್ಟು ಮಾನಸಿಕ ತೊಂದರೆ ಕೊಟ್ಟು, ದಿನಾಂಕ 20.06.2020 ರಂದು ಎನ್.ಆರ್ ಪುರದ ಪುಷ್ಪಾ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದೆ ಗಂಡು ಮಗು ಬೇಕು ಎಂದು ಅವರನ್ನು ಅವಮಾನಿಸಿ ಬೇರೆ ಮದುವೆಯಾಗುತ್ತೇನೆ ಮನೆ ಬಿಟ್ಟು ಹೋಗು ಎಂದು

ಹಿಂಸೆ ನೀಡುತ್ತಿದ್ದಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 5) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಮ್ಮ ತಾಯಿಯೂ ಸಹ ಹಿಂಸೆ ನೀಡುತ್ತಿದ್ದು, ಸದರಿ ವಿಷಯವನ್ನು ಅವರ ತಂದೆ-ತಾಯಿ ಬಳಿ ಹೇಳಿದಾಗ ಅವರು ಸಮಾಧಾನ ಮಾಡಿ, ಚಾಸಾ6, 7, 10 ಮತ್ತು 11 ರವರು ನಿಮಗೆ ಬುದ್ಧಿ ಹೇಳಿ ಕಳುಹಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 6) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹಿಂಸೆಯನ್ನು ಸಹಿಸಿಕೊಂಡರೂ ಸಹ ದಿನಾಂಕ 15.02.2021 ರಂದು ಅವರ ವಸ್ತು ಮತ್ತು ಒಡವೆಗಳನ್ನು ಕಿತ್ತುಕೊಂಡು ನೀವು ಅವರನ್ನು ಮನೆಯಿಂದ ಹೊರಗೆ ಹಾಕಿದ್ದು, ಆಗ ಅವರ ಸಣ್ಣ ಮಗುವನ್ನು ಕರೆದುಕೊಂಡು ಅವರ ತಾಯಿ ಮನೆಗೆ ಬಂದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 7) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 07.03.2021 ರಂದು ಅವರ ಮನೆಯಲ್ಲಿ ಯಾರು ಇಲ್ಲದಾಗ ನೀವು ಅಲ್ಲಿಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು, ಹಣ ತರದಿದ್ದರೆ ನಮ್ಮ ಮನೆಗೆ ಬರಬೇಡ ಎಂದು ಕೊಲೆ ಬೆದರಿಕೆ ಹಾಕಿ ಅವರ ತಂದೆಯ ಮೇಲೂ ಸಹ ಹಲ್ಲೆ ಮಾಡಿದ್ದು, ಚಾಸಾ8 ರಿಂದ 11 ರವರು ಗಲಾಟೆ ಬಿಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 8) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮದುವೆ ಸಮಯಕ್ಕೆ ವರದಕ್ಷಿಣೆ ಪಡೆದಿದ್ದರೂ ಸಹ ನೀವು ಮತ್ತು ನಿಮ್ಮ ತಾಯಿ ಅವರಿಗೆ ಹಿಂಸೆ ನೀಡಿದ್ದು, ದಿನಾಂಕ 09.11.2021 ರಂದು ನೀವು ಎನ್.ಆರ್ ಪುರ ನ್ಯಾಯಾಲಯದಿಂದ ವಿವಾಹ ವಿಚ್ಛೇದನಕ್ಕೆ ನೋಟೀಸು ಕಳುಹಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 9) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 24.11.2021 ರಂದು ಅವರು ಕುದುರೆಮುಖ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದು, ದಿನಾಂಕ 25.11.2021 ರಂದು ಪೊಲೀಸರು ಅವರ ಮನೆಗೆ ಬಂದು ಸ್ಥಳದ ಮಹಜರ್ ಬರೆದು, ಮದುವೆ ಆಮಂತ್ರಣ ಪತ್ರಿಕೆಯನ್ನು

ಪಡೆದುಕೊಂಡರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 10) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಹಜರ್ ಸಮಯಕ್ಕೆ ಚಾಸಾ2 ಮತ್ತು 3 ರವರು ಹಾಜರಿದ್ದು, ದಿನಾಂಕ 26.11.2021 ರಂದು ನಿಮ್ಮ ಮನೆಗೆ ಹೋಗಿ ಅಲ್ಲಿ ಬೀರುವಿನಲ್ಲಿದ್ದ ಒಂದು 10 ಗ್ರಾಂ ಕೈಚೈನ್ ಮತ್ತು 2 ಗ್ರಾಂ ರಿಂಗ್ ಅನ್ನು ವಶಕ್ಕೆ ಪಡೆದಾಗ ಚಾಸಾ4 ಮತ್ತು 5 ರವರೂ ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 11) ಪ್ರಾಸಾ-2 ಸುಧಾಕರ್ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಚಾಸಾ1 ರವರೊಂದಿಗೆ ಗಲಾಟೆ ಮಾಡಿರುವ ವಿಚಾರಕ್ಕೆ ಪೊಲೀಸರು ಸ್ಥಳಕ್ಕೆ ಬಂದು ಬರವಣಿಗೆ ಮಾಡಿ ಅವರ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 12) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಮಯಕ್ಕೆ ಚಾಸಾ1 ರವರು ತಮ್ಮ ಮದುವೆ ಆಮಂತ್ರಣ ಪತ್ರಿಕೆಯನ್ನು ಪೊಲೀಸರಿಗೆ ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 13) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

ಉತ್ತರಃ

ಪ್ರಶ್ನೆಃ 14) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-

ಮೂಡಿಗೆರೆ
ದಿನಾಂಕಃ 09.06.2026.

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.